ಓಂಕಾರಯ್ಯನೇ ಹಣ ಲಪಟಾಯಿಸಿದ್ದಾನೆಂದು ಆರೋಪಿಸುವುದು!"

"ನೀನು ಹೀಗೆ ಊಹೆ ಮಾಡಲು ಆಧಾರವೇನಾದರೂ ಇದೆಯಾ?"

"ಓಂಕಾರಯ್ಯನಲ್ಲಿ ಸಿಕ್ಕಿದ ಚೀಲದಲ್ಲಿದ್ದ ಪರ್ಸ್ ಪಿಕ್ ಪಾಕೆಟ್ ಆಗಿರುವ ಸಾಧ್ಯತೆಯನ್ನು ತೋರಿಸುತ್ತೆ. ಇಲ್ಲದೇ ಇದ್ದಲ್ಲಿ, ಒಬ್ಬಾತ ಯಾಕೆ ಪರ್ಸನ್ನು ತನ್ನ ಮಿತ್ರನಿಗೆ ನೀಡಬಯಸುತ್ತಾನೆ? ನನ್ನ ಈ ಯೋಚನೆಯನ್ನು ದೃಢೀಕರಿಸಿದ್ದು ಪತ್ರಿಕೆಗಳ ವರದಿಗಳು. ಆ ಸಮಯದಲ್ಲಿ ಅಂದರೆ, ಡಿಸೆಂಬರ್ ಹನ್ನೆರಡರ ಹಿಂದಿನ ಕೆಲವು ದಿನಗಳ ಪತ್ರಿಕೆಗಳನ್ನು ಜಾಲಾಡಿದಾಗ, ವಿರಾಜಪೇಟೆಯ ಬಸ್ ನಿಲ್ದಾಣದಲ್ಲಿ ಅನೇಕ ಪಿಕ್ ಪಾಕೆಟ್ ಪ್ರಕರಣಗಳು ನಡೆದಿದ್ದವೆಂದು ವರದಿಯಾಗಿತ್ತು..."

"ನೀನು ಡಿಸೆಂಬರ್ ಹದಿಮೂರರ ಪತ್ರಿಕೆ ನೋಡಿದ್ಯಾ?"

"ನಾನು ಡಿಸೆಂಬರ್ ಹದಿನಾಲ್ಕರವರೆಗಿನ ಪತ್ರಿಕೆಗಳನ್ನೂ ನೋಡಿದ್ದೀನಿ. ಹಾಗಾಗಿ ಮೇದಪ್ಪ ಪಿಕ್ ಪಾಕೆಟ್ ಮಾಡಿದ ಹಣವೆಂದು ಸುಲಭವಾಗಿ ಊಹಿಸಬಹುದು. ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ ಪೊಲೀಸರು ನಿಲ್ದಾಣದಲ್ಲಿ ಗಸ್ತು ಜಾಸ್ತಿ ಮಾಡಿದರೆಂದೂ, ಆ ನಂತರ ಪಿಕ್ ಪಾಕೆಟ್ ಕಡಿಮೆಯಾಯಿತೆಂದಿದೆ."

"ಹಾಗಿದ್ದರೆ ಆ ಚೀಲದಲ್ಲಿ ಪೇಪರ್ ವೆಯಿಟ್ ಯಾಕೆ ಬಂತು? ಕುಪ್ಪಂಡ ವೇಣು ಪೇಪರ್ ವೆಯಿಟ್ ಅಂತ ಯಾಕೆ ಬರೆದ?"

"ಪಿಕ್ ಪಾಕೆಟ್ ಮಾಡಿದ ಆ ಚೀಲದ ಮಾಲೀಕ ನಕ್ಷತ್ರ ಜ್ಯುವೆಲ್ಲರಿಗೆ ಹೋಗಿದ್ದಿರಬೇಕು. ಷೋರೂಮಿನವರು ಕೊಟ್ಟ ಪೇಪರ್ ವೆಯಿಟ್ ಚೀಲದಲ್ಲಿತ್ತು, ಅಷ್ಟೇ! ಗೋಪ್ಯತೆ ಕಾಪಾಡಲು ಪೇಪರ್ ವೆಯಿಟ್ ಅಂತ ಬರೆದಿರಬೇಕು. ಹಣ ಅಂತ ಬರೆದರೆ, ತೊಂದರೆ ಆದೀತೆಂದು..."

"ಶಹಬ್ಬಾಸ್, ಬಿದ್ದಪ್ಪ. ನಿನ್ನ ಊಹನೆ ತರ್ಕಬದ್ಧವಾಗಿದೆ. ಪಿಕ್ ಪಾಕೆಟ್ ಸಂಬಂಧ ಯಾರನ್ನೂ ಪೊಲೀಸರು ಬಂಧಿಸಿಲ್ವೆ?"

"ಇಲ್ಲ. ಈಗ ಆ ತಂಡದ ಸದಸ್ಯನ ಮಿತ್ರ ಓಂಕಾರಯ್ಯನ ಮನೆಗೆ ಬರಲಿದ್ದಾನೆ. ಆತನನ್ನು ಹಿಡಿದರೆ, ಇಡೀ ತಂಡವನ್ನು ಹಿಡಿಯಬಹುದು."

"ನನಗೇಕೋ ಆ ಪೇಪರ್ ವೆಯಿಟ್ ಪದ ಬಳಸಿದ್ದು ವಿಚಿತ್ರವಾಗಿಯೇ ಕಾಣ್ತಿದೆ. ನಾನೀಗ ತುರ್ತಾಗಿ ಹೋಗಬೇಕು. ಒಂದಿಷ್ಟು ತನಿಖೆ ಮಾಡೋದಿದೆ. ನೀನೊಮ್ಮೆ ಪೊಲೀಸ್ ಠಾಣೆಗೆ ಹೋಗಿ ಆ ಪಿಕ್ ಪಾಕೆಟ್ ಪ್ರಕರಣದ ಬಗ್ಗೆ ವಿಚಾರಿಸಿ ಬಾ." ನಾನು ತಲೆಯಾಡಿಸಿದೆ.

★★★

ಮತ್ತೆರಡು ದಿನದವರೆಗೂ ಕರಮಚಂದನೊಡನೆ ನನಗೆ ಸರಿಯಾಗಿ ಮಾತನಾಡಲು ಅವಕಾಶವೇ ಸಿಗಲಿಲ್ಲ.

"ಕರಮಚಂದ, ನಾನು ಪೊಲೀಸ್ ಠಾಣೆಯಲ್ಲಿ ವಿಚಾರಿಸಿದೆ. ಯಾವುದೋ ಕೇರಳದ ತಂಡವೊಂದು ಇಲ್ಲಿ ಪಿಕ್ ಪಾಕೆಟ್ ಮಾಡಿದೆ ಅಂತ ಅವರಿಗೆ ಅನುಮಾನವಂತೆ. ಕೆಲವು ಸುಳಿವುಗಳು ಸಿಕ್ಕಿವೆಯಂತೆ. ತಂಡದ ಕಿಂಗ್‌ಪಿನ್‌ಗಾಗಿ ಬಲೆ ಬೀಸುತ್ತಿದ್ದಾರಂತೆ." ನಾನು ವಿವರಗಳನ್ನು ನೀಡಿದೆ, ಮೂರನೆಯ ದಿನ ಸಂಜೆ.

"ಹೌದೇ? ನಾನು ಬೇರೆಯದೇ ದಿಕ್ಕಿನಲ್ಲಿ ಯೋಚಿಸ್ತಾ ಇದ್ದೆ."

ಅಷ್ಟರಲ್ಲಿ ಆತನ ಚರವಾಣಿ ರಿಂಗಣಿಸಿತು.

"ಕಾಳಪ್ಪ ಫೋನು ಮಾಡ್ತಿದ್ದಾನೆ. ನಾವೀಗಲೇ ಓಂಕಾರಯ್ಯನ ಮನೆಗೆ ಹೊರಡೋಣ. ರಿವಾಲ್ವರ್ ಹಿಡಿದುಕೋ... ವೇಗವಾಗಿ ಕಾರು ಚಲಾಯಿಸು."

ಕರಮಚಂದ ಕಾಳಪ್ಪನೊಂದಿಗೆ ಸಂಭಾಷಿಸುತ್ತಿದ್ದಂತೆ ನಾವು ಕಾರನ್ನೇರಿದೆವು. ಹತ್ತೇ ನಿಮಿಷಗಳಲ್ಲಿ